ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 17–11–2020

# ಪತ್ರಿಕಾ ಆಮಂತ್ರಣ

1) "ವಾಯುಮಾಲಿನ್ಯ ನಿಯಂತ್ರಣ ಜಾಗೃತಿ" ಮಾಸಾಚರಣೆ–2020 ಪ್ರಯುಕ್ತ ಕಾಲ್ನಡಿಗೆ ಜಾಥ ಉದ್ಘಾಟನಾ ಸಮಾರಂಭ :

ಉದ್ಘಾಟನೆ:

ಬಿ. ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ:

ಶ್ರೀಮತಿ ನಿರ್ಮಲಾ ಸೀತಾರಾಮನ್, ಕೇಂದ್ರ ಹಣಕಾಸು ಸಚಿವರು, ಭಾರತ ಸರ್ಕಾರ

ಡಿ.ವಿ. ಸದಾನಂದಗೌಡ, ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು, ಭಾರತ ಸರ್ಕಾರ

ಉಪಸ್ಥಿತಿ:

ಲಕ್ಷ್ಮಣ ಎಂ ಸವದಿ, ಉಪ ಮುಖ್ಯಮಂತ್ರಿಗಳು ಮತ್ತು ಸಾರಿಗೆ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು

ಅಧ್ಯಕ್ಷತೆ:

ರಿಜ್ವಾನ್ ಹರ್ಷದ್. ಶಾಸಕರು ಶಿವಾಜಿನಗರ ವಿಧಾನಸಭಾ ಕ್ಷೇತ್ರ.

ದಿನಾಂಕ : 18–11–2020, ಬುಧವಾರ, ಸಮಯ: ಬೆಳಿಗ್ಗೆ 07–30 ಗಂಟೆಗೆ

ಸ್ಥಳ: ಕಂಠೀರವ ಕ್ರೀಡಾಂಗಣ, ಬೆಂಗಳೂರು.

**2) ಕರ್ನಾಟಕ ವಿಧಾನಮಂಡಲದ 2020-21ನೇ ಸಾಲಿನ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಪ್ರಾರಂಭಿಕ ಸಭೆ :**

**ಅಧ್ಯಕ್ಷತೆ:**

**ದಿನಕರ್ ಕೇಶವ ಶೆಟ್ಟಿ , ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಸದಸ್ಯರು**

**ದಿನಾಂಕ: 18-11-2020, ಬುಧವಾರ, ಸಮಯ: 11-00 ಗಂಟೆಗೆ**

**ಸ್ಥಳ: ಶಾಸಕರ ಭವನ-2ರ ಸಮ್ಮೇಳನ ಸಭಾಂಗಣ, ಬೆಂಗಳೂರು.**

**3) Karnataka State Administrative Tribunal**

**Release of Karnataka Services Law Journal and launching of New KSAT new website**

**Launch by :**

**Hon'ble Justice K. Bhakthavathsala, Chairman, Karnataka State Administrative Tribunal, Bengaluru**

**Date : 18-11-2020 Wednesday , Time : 4-00 p.m.**

**Venue : Karnataka State Administrative Tribunal, Kandaya Bhavan, K.G. Road, Bengaluru.**

## ತಮಿಳುನಾಡಿಗೆ ಕೆ.ಎಸ್.ಆರ್.ಟಿ.ಸಿ. ಬಸ್ ಸೇವೆ ಮುಂದುವರಿಕೆ

**ಬೆಂಗಳೂರು, ನವೆಂಬರ್ 17 (ಕರ್ನಾಟಕ ವಾರ್ತೆ)**

ಕೋವಿಡ್-19 ಹಾಗೂ ಲಾಕ್‌ಡೌನ್ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಅಂತರರಾಜ್ಯ ಸಾರಿಗೆಗಳ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿರುತ್ತದೆ. ಕೋವಿಡ್-19ನ ಲಾಕ್‌ಡೌನ್ ಸಡಿಲ ಗೊಂಡಿರುವ ಹಿನ್ನೆಲೆಯಲ್ಲಿ ದಿನಾಂಕ:11.11.2020 ರಿಂದ 16.11.2020 ರವರೆಗೆ ಕರ್ನಾಟಕ ರಾಜ್ಯದಿಂದ ತಮಿಳುನಾಡು ರಾಜ್ಯಕ್ಕೆ ವಿಶೇಷ ಸಾರಿಗೆಗಳ ಕಾರ್ಯಾಚರಣೆಯನ್ನು ಮಾಡಲು ಕ್ರಮ ಕೈಗೊಳ್ಳಲಾಗಿತ್ತು. ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ತಮಿಳುನಾಡು ರಾಜ್ಯಕ್ಕೆ ಈ ಹಿಂದೆ ಕಾರ್ಯಾಚರಿಸುತ್ತಿದ್ದಂತೆ ಕರ್ನಾಟಕ ರಾಜ್ಯದ ವಿವಿಧ ಸ್ಥಳಗಳಿಂದ ತಮಿಳುನಾಡು ರಾಜ್ಯದ ವಿವಿಧ ಸ್ಥಳಗಳಿಗೆ ಪ್ರಯಾಣಿಕರ ದಟ್ಟಣೆಗೆ ಅನುಗುಣವಾಗಿ ಎಲ್ಲಾ ಸಾರಿಗೆಗಳ ಕಾರ್ಯಾಚರಣೆಯನ್ನು ದಿನಾಂಕ 16.11.2020ರ ನಂತರವೂ

ಮುಂದುವರೆಸಲಾಗುವುದು. ಎಲ್ಲಾ ಪ್ರಯಾಣಿಕರು ಕಡ್ಡಾಯವಾಗಿ ಮಾಸ್ಕ್‌ಧರಿಸ ಬೇಕಾಗಿರುತ್ತದೆ. ಮುಂಗಡ ಆಸನಗಳನ್ನು www.ksrtc.in ವೆಬ್‌ಸೈಟ್‌ಮತ್ತು ನಿಗಮದ/ಫ್ರಾಂಚೈಸಿ ಕೌಂಟರ್‌ಗಳ ಮುಖಾಂತರ ಕಾಯ್ದಿರಿಸಿಕೊಳ್ಳಬಹುದಾಗಿದೆ. ಪ್ರಯಾಣಿಕರು ಸದರಿ ಸೌಲಭ್ಯದ ಸದುಪಯೋಗ ಪಡೆಯಲು ಪ್ರಕಟಣೆ ತಿಳಿಸಿದೆ.

Karnataka State Road Transport Corporation had stopped operation of inter-state bus services due to Covid-19 and Lockdown. As lockdown has been relaxed, KSRTC has taken action to operate special services from Karnataka State to Tamilnadu State from 11.11.2020 to 16.11.2020. For the convenience of the travelling public, KSRTC will continue to operate all the regular services from different places of Karnataka State to various places of Tamilnadu State as was being operated earlier after 16.11.2020 also. The services will be operated keeping in view the density of passengers. It is mandatory for all passengers to wear mask. Passengers can book tickets in advance online at www.ksrtc.inor through KSRTC/Franchisee advance reservation counters says official press release.

## ಸರ್ವಕಾಲದಲ್ಲೂ ಮಾಧ್ಯಮ ತನ್ನ ಸಾಮಾಜಿಕ ಜವಾಬ್ದಾರಿಯನ್ನು ತಾನು ನಿರ್ವಹಿಸಲೇಬೇಕು : ಹೆಚ್.ಆರ್.ರಂಗನಾಥ್

**ಬೆಂಗಳೂರು, ನವೆಂಬರ್–17 : ಸರ್ವಕಾಲದಲ್ಲೂ ಮಾಧ್ಯಮ ತನ್ನ ಸಾಮಾಜಿಕ ಜವಾಬ್ದಾರಿಯನ್ನು ತಾನು ನಿರ್ವಹಿಸಲೇಬೇಕು ಎಂದು ಹೆಚ್.ಆರ್.ರಂಗನಾಥ್ ಅಧ್ಯಕ್ಷರು / ವ್ಯವಸ್ಥಾಪಕ ನಿರ್ದೇಶಕರು, ಪಬ್ಲಿಕ್ ಟಿವಿ ಅವರು ತಿಳಿಸಿದರು.**

**ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಮತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ಸಹಭಾಗಿತ್ವದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಅಂಗವಾಗಿ ಕೋವಿಡ್–19 ಸಂದರ್ಭದಲ್ಲಿ ಮಾಧ್ಯಮಗಳ ಪಾತ್ರ ಮತ್ತು ಪ್ರಭಾವ ಕುರಿತು ಮಿಂಚ್ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.**

**ಕೋವಿಡ್–19 ಪತ್ರಕರ್ತರಿಗೆ ಹೊಸ ಸವಾಲುಗಳನ್ನು ಹಾಗೂ ಅನುಭವಗಳನ್ನು ಹುಟ್ಟಿಹಾಕಿದೆ. ನಾನು ಪ್ಲೇಗ್ ನೋಡಿರಲಿಲ್ಲ ಆದರೆ ಪ್ರಸ್ತುತ ಕೋವಿಡ್–19 ಸಾಂಕ್ರಾಮಿಕ ರೋಗ ನಮ್ಮ ಜೀವನದ ಶೈಲಿಯನ್ನೇ ಬದಲಾಯಿಸಿದೆ. ಸರ್ವಕಾಲದಲ್ಲೂ ಮಾಧ್ಯಮ ತನ್ನ ಸಾಮಾಜಿಕ ಜವಾಬ್ದಾರಿಯನ್ನು ತಾನು ನಿರ್ವಹಿಸಲೇಬೇಕು**

ಎಂಬ ಪಾಠವನ್ನು ಹೇಳಿದೆ. ಮಾಧ್ಯಮ ಎಂದೆಂದಿಗೂ ಸಮಾಜಮುಖಿಯಾಗಿರಬೇಕು. ಸವಾಲುಗಳು ಬಂದಾಗ ಪತ್ರಕರ್ತರು ಹೆದರಿ ಓಡಿಹೋಗಬಾರದು. ಪತ್ರಕರ್ತರ ಸಾಮಾಜಿಕ ಜವಾಬ್ದಾರಿ ಸರ್ವಕಾಲಕ್ಕೂ ಇರುತ್ತದೆ.

ಕೊರೊನಾ ಸಂದರ್ಭದಲ್ಲಿ ಭಾರತೀಯ ಮಾಧ್ಯಮಗಳು  ಬಹಳ ಎಚ್ಚರಿಕೆಯಿಂದ, ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿದೆ. ನನ್ನ ಪ್ರಕಾರ ಮಾಧ್ಯಮಗಳು ಪ್ರಭಾವಶಾಲಿಯಾಗಿ ಕರ್ತವ್ಯವನ್ನ ನಿರ್ವಹಿಸಿದೆ. ಮಾಧ್ಯಮಗಳು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಲೇ ಸಮಾಜಕ್ಕೆ ಪ್ರೇರಣೆಯಾಗಿ ನಿಂತವು. ಕೋವಿಡ್–19 ನಿವಾರಣೆ ಸಮುದಾಯದ ಸಹಭಾಗಿತ್ವದಲ್ಲಿ ಗೆಲ್ಲಲೆಬೇಕಾದ ಯುದ್ಧವಾಗಿದೆ ಎಂದು ಹೇಳಿದರು.

ಪ್ರಧಾನ ಭಾಷಣ ಮಾಡಿದ ಡಾ. ಪದ್ಮರಾಜ ದಂಡಾವತಿ ಅವರು ಮಾತನಾಡಿ ಕೋವಿಡ್–19 ರ ಸಂದರ್ಭದಲ್ಲಿ ಹರಡಿದ ಸುಳ್ಳು ವದಂತಿಗಳು, ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ ಸುದ್ದಿಗಳು ಜನ ಸಮುದಾಯವನ್ನು ವಿಹ್ವಲಗೊಳಿಸಿದ್ದು ನಿಜ. ಸುಳ್ಳು ಸುದ್ದಿಗಳು ಯಾವುದೊ ಒಂದು ರೂಪದಲ್ಲಿ ಸಮಾಜದಲ್ಲಿ ಹರಿದಾಡುವಾಗ ಮಾಧ್ಯಮಗಳಿಂದ ಅವುಗಳನ್ನು ತಡೆಯುವ ಕಾರ್ಯವಾಗಲಿ, ಪರಿಷ್ಕರಣೆಯಾಗಲಿ ಸಮರ್ಪಕವಾಗಿ ನಡೆಯಬೇಕಿತ್ತು. ಆದರೆ ಹಾಗಾಗದೆ ಹೋದದ್ದು ದುರದೃಷ್ಟಕರ. ಟಿವಿ ಮಾಧ್ಯಮಗಳ ಪುನರಾವರ್ತಿತ ಸುದ್ದಿಗಳು ಭಯದ ವಾತಾವರಣ ಮೂಡಿಸಿದ್ದು ಅಷ್ಟೇ ನಿಜ. ಈ ಹಿನ್ನೆಲೆಯಲ್ಲಿ ಮುದ್ರಣ ಮಾಧ್ಯಮಗಳು ಹೆಚ್ಚಿನ ಪ್ರಬುದ್ಧತೆ ತೋರಿಸಿದವು ಎನ್ನಬಹುದು. ಮನೆಯಲ್ಲೇ ಮಾಸ್ಕ್ ತಯಾರಿಕೆ, ಆರೋಗ್ಯ ಕಾಪಾಡಿಕೊಳ್ಳುವ ಕುರಿತು, ಸಾಮಾಜಿಕವಾಗಿ ಬೇರೆ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಅತ್ಯುತ್ತಮ ಮಾಹಿತಿ ನೀಡಿದ್ದವು. ಇತ್ತೀಚಿನ ಸಮೀಕ್ಷೆಗಳೂ ಕೂಡ ಮುದ್ರಣ ಮಾಧ್ಯಮವೇ ವಿಶ್ವಾಸಾರ್ಹ ಎಂದು ಹೇಳುತ್ತಿವೆ. ಒಟ್ಟಾರೆ ಪತ್ರಿಕೋದ್ಯಮಕ್ಕೆ ಇದು ಕೆಟ್ಟ ಕಾಲವೂ ಹಾಗೂ ಕೆಲಸ ನಿರ್ವಹಿಸಲು ಒಳ್ಳೆಯ ಅವಕಾಶವಿದ್ದ ಕಾಲವೂ ಇದಾಗಿದ್ದು ವಿಪರ್ಯಾಸ ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶೇಷಚಂದ್ರಿಕ ಅವರು ಮಾತನಾಡಿ ಕೋವಿಡ್ ಮೇಲಿನ ಸಮರ ಜನಾಂದೋಲನವಾಗಲಿಲ್ಲ ಬದಲಿಗೆ ಮನೆ ಮನೆಗೆ ಮಾತ್ರ ಸೀಮಿತವಾಯಿತು. ಎಲ್ಲಾ ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ಏಕೀಕೃತ ಇಚ್ಚಾಶಕ್ತಿಯನ್ನು ಪ್ರಕಟಗೊಳಿಸಬೇಕಾದ ತುರ್ತು ಅಗತ್ಯವಿದ್ದರು ಹಾಗಾಗದೆ ಹೋದದ್ದು ದುರದೃಷ್ಟಕರ. ಈ ನಿಟ್ಟಿನಲ್ಲಿ ಮಾಧ್ಯಮಗಳು ಸಹ ಸಕಾರಾತ್ಮಕ ಇಚ್ಚಾಶಕ್ತಿಯನ್ನು ಪರಿಣಾಮಕಾರಿಯಾಗಿ ತೋರಲೇ ಇಲ್ಲ ಎಂದು ವಿಷಾದಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮತ್ತೊಬ್ಬರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಿವಾನಂದ ತಗಡೂರು ಅವರು ಮಾತನಾಡಿ ಕೋವಿಡ್ ಸಂದರ್ಭದಲ್ಲಿ ಪತ್ರಕರ್ತರು ಬಹಳ ಕರಾಳ ದಿನಗಳನ್ನು ಅನುಭವಿಸಿದರು. ಬಹಳಷ್ಟು ಪತ್ರಕರ್ತ ಗೆಳೆಯರನ್ನ ಕಳೆದುಕೊಂಡದ್ದು ದುರಂತ. ಸಂತ್ರಸ್ತ ಕುಟುಂಬಗಳಿಗೆ ರೂ. 5 ಲಕ್ಷ ಗಳನ್ನು ಧನಸಹಾಯವನ್ನು ಸರ್ಕಾರ ಮಾಡಿದೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅವಿರತ ಹೋರಾಟದ ಫಲವಾಗಿ ಆಯುಷ್ಮಾನ್ ಹೆಲ್ತ್ ಕಾರ್ಡ್‌ಗಳು ಬಿಡುಗಡೆಯಾಗಿದೆ. ಪತ್ರಕರ್ತರ ಯೋಗಕ್ಷೇಮಕ್ಕಾಗಿ ಸಂಘ  ಕೋವಿಡ್ ಸಂದರ್ಭದಲ್ಲಿ ಬಹಳಷ್ಟು ಶ್ರಮವಹಿಸಿ ಕೆಲಸ ಮಾಡಿದೆ, ಪತ್ರಕರ್ತರಲ್ಲಿ ನೈತಿಕ ಸ್ಥೈರ್ಯ ತುಂಬುವ ಕೆಲಸವನ್ನು ಸಂಘ ಮಾಡುತ್ತಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಪ್ರೆಸ್‌ಕ್ಲಬ್ ಆಫ್ ಬೆಂಗಳೂರು ಅಧ್ಯಕ್ಷರಾದ ಸದಾಶಿವ ಶೆಣೈ ಕೋವಿಡ್-19 ಸಂದರ್ಭದಲ್ಲಿ ಅನೇಕ ಪತ್ರಕರ್ತರು ಸಾವಿಗೀಡಾಗಿದ್ದು ದುರಂತದ ಸಂಗತಿ. ಪತ್ರಕರ್ತರಿಗೆಂದು ಆರೋಗ್ಯನಿಧಿ ಇದ್ದಿದ್ದ ಪಕ್ಷದಲ್ಲಿ ಸಂಕಷ್ಟಕ್ಕೀಡಾದ ಪತ್ರಕರ್ತರ ಕುಟುಂಬಕ್ಕೆ ಸಹಾಯ ಒದಗಿಸಲು ಬಹಳಷ್ಟು ಉಪಯುಕ್ತವಾಗುತ್ತಿತ್ತು. ಪ್ರಸ್ತುತ ಸಂದರ್ಭದಲ್ಲಿ ಆರೋಗ್ಯನಿಧಿಯ ಅವಶ್ಯಕತೆ ಬಹಳಷ್ಟಿದೆ. ಈ ನಿಟ್ಟಿನಲ್ಲಿ ನಾವೆಲ್ಲರು ಆಲೋಚಿಸಬೇಕಾದ ತುರ್ತುಇದೆ. ಕೋವಿಡ್-19 ರ ಸಂದರ್ಭದಲ್ಲಿ ಪತ್ರಕರ್ತರಿಗೆ/ಪತ್ರಿಕಾಲಯ ಸಿಬ್ಬಂದಿಗೆ ವೇತನವನ್ನು ಪಾವತಿ ಮಾಡಲಾಗದ ಸ್ಥಿತಿಗೆ ತಲುಪಿದ್ದೇವೆ. ಟಿವಿ ಮಾಧ್ಯಮಗಳು ಹಾಗೂ ಮುದ್ರಣ ಮಾಧ್ಯಮಗಳು ಪತ್ರಕರ್ತರಿಗೆ ವೇತನ ನೀಡಲಾಗದೆ ಅವರ ಆವರ್ತನಿಧಿಯಿಂದ ನೀಡಿದ ನಿದರ್ಶನಗಳಿವೆ ಎಂದು ಹೇಳಿದರು. ಕರ್ನಾಟಕ ಮಾಧ್ಯಮ ಅಕಾಡೆಮಿಯ ಕಾರ್ಯದರ್ಶಿ ಸಿ.ರೂಪಾ, ಮಾನಸ ಗಂಗೋತ್ರಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರು, ಕುವೆಂಪು ವಿಶ್ವವಿದ್ಯಾಲಯ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರು ಉಪಸ್ಥಿತರಿದ್ದರು.

## ನವೆಂಬರ್ 23 ರಂದು ಮುಖ್ಯಮಂತ್ರಿಗಳ ಪದಕ ಪ್ರದಾನ ಸಮಾರಂಭ

ಬೆಂಗಳೂರು, ನವೆಂಬರ್ 17 (ಕರ್ನಾಟಕ ವಾರ್ತೆ): ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಅರಣ್ಯ ಇಲಾಖೆಯಲ್ಲಿ 2017, 2018 ಹಾಗೂ 2019ನೇ ಸಾಲಿನ ರಾಜ್ಯದ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯಲ್ಲಿ ಗಣನೀಯ ಸಾಧನೆ ಮಾಡಿದ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ ಸಮಾರಂಭವನ್ನು ನವೆಂಬರ್ 23 ರಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪದಕ ಪ್ರದಾನ ಮಾಡುವರು. ಅಧ್ಯಕ್ಷತೆಯನ್ನು ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ರಿಜ್ವಾನ್ ಅರ್ಷದ್ ವಹಿಸುವರು.

ವಿಶೇಷ ಆಹ್ವಾನಿತರಾಗಿ ಭಾರತ ಸರ್ಕಾರದ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರಾದ ಡಿ.ವಿ. ಸದಾನಂದಗೌಡ, ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ಹಾಗೂ ರಾಜ್ಯ ಸರ್ಕಾರದ ಸಚಿವರುಗಳು, ಲೋಕಸಭಾ ಸಂಸದರು, ರಾಜ್ಯಸಭೆ ಸಂಸದರು, ವಿಧಾನಸಭೆ ಶಾಸಕರು, ವಿಧಾನಪರಿಷತ್ ಶಾಸಕರು ಉಪಸ್ಥಿತರಿರುವರು.